(ಶ್ರೀ ಟಿ. ಸಿದ್ದಲಿಂಗಯ್ಯನವರು).

information just now. I may be permitted to read it out to the House. ತಾವು ಹಿಂದೆ ಕೇಳಿದ ಪ್ರಶ್ನೆಗೆ ಜವಾಬು.—

1947—48ರಲ್ಲಿ	19,050	ರೂಪಾಯಿಗಳು.
1948—49ರಲ್ಲಿ	14 100	,,
1949—50ರಲ್ಲಿ	46,511	,,
1950—51ರಲ್ಲಿ	86,000	,,
1951—52ರಲ್ಲಿ	14,000	,,

ಇಷ್ಟು ಹಣ ಮಂಜೂರಾಗಿದೆ.

ಶ್ರೀ ಕೆ. ಲಕ್ಕಪ್ಪನವರು.—ಈ ಯೋಜನೆ ಪ್ರಕಾರ ಅರ್ಹತೆ (ಕ್ವಾಲಿಫಿಕೇಷನ್) ಇರುವವರಿಗೆ ಸಹಾಯ ಮಾಡುತ್ತಿದ್ದೀರೋ ಅಥವಾ ಎಲ್ಲರಿಗೂ ಮಾಡುತ್ತಿದ್ದೀರೋ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನಿರುದ್ಯೋಗಿಗಳು ಎಂಬುದೊಂದು, ವಿದ್ಯಾವಂತರು ಎಂಬುದು ಎರಡನೆಯದು—ಈ ಎರಡು ಅರ್ಹತೆಗಳಿರುವವರಿಗೂ ಸಹಾಯ ಮಾಡಬೇಕೆಂದು ಗೊತ್ತುಮಾಡಿದೆ.

ಶ್ರೀ ಕೆ. ಲಕ್ಕಪ್ಪನವರು.—ಹೆಣ್ಣು ಮಕ್ಕಳು, ಗಂಡ ಮಕ್ಕಳು—ಎಲ್ಲರಿಗೂ ಸಹಾಯ ಮಾಡುತ್ತಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು, ಅದರಲ್ಲಿ ಲಿಂಗ ಭೇದವಿಲ್ಲ.

Sri H. C. LINGA REDDY (Malur).—Is it not a fact that the unemployment problem becomes more acute with the retrenchment policy that the Government are pursuing ?

Mr. SPEAKER.—That does not arise out of this question.

Accumulation of stocks of goods manufactured in Spun Silk Factory at Channapatna.

Q.—497. **Sri G. PAPANNA** (Sidlaghatta—Chikballapur).—

Will the Government be pleased to state :—

The reason for the accumulation of stocks of goods manufactured in Spun Silk Factory at Channapatna ?

A.—**Sri T. SIDDALINGAIYA** (Minister for Industries).—

The Spun Silk Factory at Channapatna is a Joint-Stock concern over which Government have no direct control and no information concerning matters relating to that Company can be furnished by Government.

ಶ್ರೀ ಜಿ. ಪಾಪಣ್ಣನವರು—ಈ ಸ್ಪನ್ ಸಿಲ್ಕ್ ಕಾರ್ಖಾನೆಯ ಚೇರ್ಮನ್ ಸರ್ಕಾರಿ ಅಧಿಕಾರಿಯಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು.

ಶ್ರೀ ಜಿ. ಪಾಪಣ್ಣನವರು.—ಈ ಕಾರ್ಖಾನೆಯಲ್ಲಿ ಸರ್ಕಾರದ ಷೇರು ಎಷ್ಟಿದೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸುಮಾರು 2½ ಲಕ್ಷ ರೂಪಾಯಿಗಳಷ್ಟು ಇದೆ.

ಶ್ರೀ ಜಿ. ಪಾಪಣ್ಣನವರು.—ಈ ಕಂಪೆನಿಗೆ ಸಂಬಂಧಪಟ್ಟ ಯಾವ ವಿವರವನ್ನೂ ಸರ್ಕಾರದವರು ಒದಗಿಸಲು ಸಾಧ್ಯವಿಲ್ಲ ಎಂದು ಹೇಳಿದ್ದೀರಿ. ಇದರ ಹಣಕಾಸಿನ ಸ್ಥಿತಿ ಹೇಗಿದೆಯೆಂದು ತಿಳಿದುಕೊಳ್ಳಬಹುದೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಿಳಿದುಕೊಳ್ಳಬಹುದು.

ಶ್ರೀ ಜಿ. ಪಾಪಣ್ಣನವರು.—ಈ ಕಂಪೆನಿ ಲಾಭದಲ್ಲಿದೆಯೆ ಅಥವಾ ನಷ್ಟದಲ್ಲಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಲಾಭದಲ್ಲಿಯೇ ಇದೆ.

ಶ್ರೀ ಜಿ. ಪಾಪಣ್ಣನವರು.—ಲಾಭ ನಷ್ಟದ ತಖ್ತೆ ಪ್ರತಿ ವರ್ಷವೂ ತಮಗೆ ಬರುತ್ತದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬರುತ್ತದೆ.

ಶ್ರೀ ಜಿ. ಪಾಪಣ್ಣನವರು.—ಲಾಭ ನಷ್ಟ ತಿಳಿದುಕೊಳ್ಳುವಾಗ ಸ್ಟಾಕ್ ಎಷ್ಟಿದೆ ಎಂಬ ವಿವರ ಕಳುಹಿಸುವುದಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಎಲ್ಲವೂ ಬರುತ್ತದೆ.

ಶ್ರೀ ಜಿ. ಪಾಪಣ್ಣನವರು.—ಹಾಗಾದರೆ ಏಕೆ ತಿಳಿಸಬಾರದು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಪಬ್ಲಿಕ್ ಮಾಡತಕ್ಕ ಪದ್ಧತಿ ಸರಿಯಿಲ್ಲ. ಕಾರಣ ಅದು ಜಾಯಿಂಟ್ ಸ್ಟಾಕ್ ಕಂಪೆನಿ.

Legislation for relief of agricultural labour.

Q.—55. **Sri T. HANUMIAH** (Hiriyur—Scheduled Castes).—

Will the Government be pleased to state :—

(*a*) Whether they have thought of introducing any Bill for the relief of agricultural labour in the State ;

(*b*) Whether they intend fixing minimum wages to an agriculturist just as it is done in the case of an industrial labourer ;

(*c*) the living index of an agricultural labourer ;

(*d*) his average earning per day in the State ;

(*e*) their proposal to ameliorate the conditions of agricultural labourers ?

A.—**Sri A. G. RAMACHANDRA RAO** (Minister for Law and Education).—

(*a*) No.

(*b*) Yes. Action is being taken to fix minimum wages in the case of agricultural labour.

(*c*) This information is not being collected at present.

(*d*) Information is not available at present.

(*e*) Implementing the provisions of the Minimum Wages Act, 1948, and fixing minimum rates of wages in Agriculture.

ಶ್ರೀ ಟಿ. ಹನುಮಯ್ಯನವರು.—ವ್ಯವಸಾಯದ ಕೂಲಿಗಾರರ ಆಕ್ಟು ತಯಾರು ಮಾಡಲಕ್ಕೆ ಪ್ರಯತ್ನ ಮಾಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ಟಿ. ಹನುಮಯ್ಯನವರು.—ವ್ಯವಸಾಯದ ಕೂಲಿಗಾರರ ಸರಾಸರಿ ಸಂಪಾದನೆ ಎಷ್ಟು ಎಂಬುದನ್ನು ತಿಳಿಸಿಲ್ಲ. ಆ ಬಗ್ಗೆ ಅಂಕಿ ಅಂಶ ತೆಗೆದುಕೊಂಡಿಲ್ಲವೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅಂಕಿ ಅಂಶ ಶೇಖರಿಸುವುದಕ್ಕೆ ಪ್ರಯತ್ನಮಾಡುತ್ತಾ ಇದ್ದೇವೆ.

ಶ್ರೀ ಟಿ. ಹನುಮಯ್ಯನವರು.—ಲಿವಿಂಗ್ ಇಂಡೆಕ್ಸ್ ತಿಳಿಸುವುದಕ್ಕೆ ಸಾಧ್ಯವೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದನ್ನು ಕೂಡ ಸಂಗ್ರಹಿಸುವುದಕ್ಕೆ ಪ್ರಯತ್ನ ನಡೆಯುತ್ತಾ ಇದೆ.

ಶ್ರೀ ಟಿ. ಹನುಮಯ್ಯನವರು.—ವ್ಯವಸಾಯದ ಕೂಲಿಗಾರರ ಜನರರ್ ಇಂಡೆಕ್ಸ್ ಆಫ್ ಲಿವಿಂಗ್ ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಈಗ ಮೂರು ಕಡೆ ಶೇಖರಣೆ ಆಗುತ್ತಾ ಇದೆ ; ಅವು ಯಾವುವೆಂದರೆ ; ಬೆಂಗಳೂರು, ಕೋಲಾರ, ಮೈಸೂರು. ಇನ್ನೂ ಕಡೆಯೂ ಇದೇ ರೀತಿ ಏರ್ಪಾಡು ಮಾಡಬೇಕು. ಇದಕ್ಕೆ ಖರ್ಚು ಜಾಸ್ತಿಯಾಗುತ್ತದೆ, ಶಿಬ್ಬಂದಿಬೇಕು. ಆದರೂ ಈ ಕೆಲಸವನ್ನು ಮುಂದುವರಿಸುತ್ತಾ ಇದ್ದೇವೆ.

ಶ್ರೀ ಟಿ. ಹನುಮಯ್ಯನವರು.—ಕೈಗಾರಿಕಾ ಕೆಲಸಗಾರರ ಲಿವಿಂಗ್ ಇಂಡೆಕ್ಸ್ ಎಷ್ಟು ?

ಶ್ರೀ ಎ. ಜಿ. ರಾಮಚಂದ್ರರಾಯರು.—ನೋಟೀಸು.

ಶ್ರೀ ಟಿ. ಹನುಮಯ್ಯನವರು.—ಬೆಂಗಳೂರು, ಮೈಸೂರು, ಕೋಲಾರದಲ್ಲಿ ಮಾತ್ರ ವ್ಯವಸಾಯದ ಕೂಲಿಗಾರರು ಇದ್ದಾರೆ ಎಂದು ತಿಳಿದುಕೊಂಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಲ್ಲ ಕೈಗಾರಿಕಾ ಕೂಲಿಗಾರರೂ ಇದ್ದಾರೆ ಎಂದು ತಿಳಿದುಕೊಂಡಿದ್ದೇವೆ.

ಶ್ರೀ ಟಿ. ಹನುಮಯ್ಯನವರು.—ತಾವು ಉತ್ತರಕೊಟ್ಟದ್ದರಲ್ಲಿ ಬೆಂಗಳೂರು, ಕೋಲಾರ, ಮೈಸೂರಿನಲ್ಲಿರುವ ವ್ಯವಸಾಯ ಕೂಲಿಗಾರರ ವಿಚಾರ ಹೇಳಿದಿರಿ. ಹಾಗಾದರೆ ಅಲ್ಲೇ ಹೆಚ್ಚು ವ್ಯವಸಾಯದ ಕೂಲಿಗಾರರಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಲ್ಲ, ಇಂಡೆಕ್ಸ್ ಆಫ್ ಲಿವಿಂಗ್ ವ್ಯವಸಾಯದ ಕೂಲಿಗಾರರಿಗೆ ಸಂಬಂಧಪಟ್ಟಂತೆ ಈಪ್ರದೇಶದಲ್ಲಿ ಸಿಕ್ಕುತ್ತಾ ಇದೆ, ಶೇಖರಣೆ ಮಾಡುತ್ತಾ ಇದ್ದೇವೆ ಎಂದು ಹೇಳಿದೆ.

ಶ್ರೀ ಟಿ. ಹನುಮಯ್ಯನವರು.—ಯಾವಾವ ಊರಿನಲ್ಲಿ ಅಂಕಿ ಅಂಶ ತಿಳಿದುಕೊಳ್ಳುತ್ತಾ ಇದ್ದೀರಿ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಈಗಾಗಲೇ ಉತ್ತರ ಹೇಳಿದೆ.

Sri G. A. THIMMAPPA GOWDA (Arkalgud).—Can we know what might be the average income of an average agriculturist ?

Sri A. G. RAMACHANDRA RAO.—It is purely a hypothetical question for me to answer.

Sri G. A. THIMMAPPA GOWDA.—What is the basis on which you are going to fix the wages for agricultural labour ?

Sri A. G. RAMACHANDRA RAO.—We are trying to collect these figures from responsible officers and the idea is also to consult members of this House.

Sri G. A. THIMMAPPA GOWDA.—What might be the number of agricultural labourers in the Mysore State ?

Sri A. G. RAMACHANDRA RAO.—I think it may be more than 60 lakhs.

Sri G. A. THIMMAPPA GOWDA.—May I know the number of those who own lands and those who do not own lands ?

Sri A. G. RAMACHANDRA RAO.—If you want specific details, notice is necessary.

Sri M. SHANKAR LINGE GOWDA (Nagamangala).—Is it not a fact that agricultural income depends upon agricultural conditions ?

Sri A. G. RAMACHANDRA RAO.—I believe so.

Sri M. SHANKAR LINGE GOWDA.—Then how does the Hon'ble Minister give the average figures ?

Sri A. G. RAMACHANDRA RAO.—By taking the average of these figures.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಈ ಅಂಕಿ ಅಂಶ ಸಂಗ್ರಹಿಸುವ ಕಾರ್ಯವನ್ನು ಇಂಡಿಯಾ ಸರ್ಕಾರದವರು ನಡೆಸುತ್ತಿದ್ದಾರೆಯೆ ಅಥವಾ ತಾವು ನಡೆಸುತ್ತಿದ್ದೀರೋ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಂಡಿಯಾ ಸರ್ಕಾರದವರೂ ಕೇಳಿದ್ದಾರೆ; ನಾವೂ ಮಾಡುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ ಈ ಕಾರ್ಯ ನಡೆಸಲಾಗುತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅನೇಕ ಕಡೆಗಳಲ್ಲಿ ಅಧಿಕಾರ ವರ್ಗದವರಿಂದ ವಿಚಾರ ಮಾಡಿ ಅಂಕಿ ಅಂಶ ಶೇಖರಣೆ ಮಾಡಲಾಗುತ್ತದೆ. ತಮ್ಮಗಳನ್ನೂ ಕೇಳಬೇಕೆಂದು ಇದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ತುಮಕೂರು ಡಿಸ್ಟ್ರಿಕ್ಟ್‌ನ ಐದು ಗ್ರಾಮಗಳಲ್ಲಿ ಸರ್ವೆ ನಡೆಸುತ್ತಾ ಇರುವುದು ಗೊತ್ತೆ ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದು ಬೇರೆ ವಿಷಯಕ್ಕೆ. ಇಂಡಿಯಾ ಸರ್ಕಾರದವರು ಕೆಲವು ಡಿಸ್ಟ್ರಿಕ್ಟುಗಳಲ್ಲಿ ಕೆಲವು ಗ್ರಾಮ, ಕೆಲವು ಹೋಬಳಿಗಳನ್ನು ಆರಿಸಿಕೊಂಡು ಸರ್ವೆ ನಡೆಸುತ್ತಾ ಇದ್ದಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಅಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಅವರು ಮಾಡುತ್ತಿರುವ ಸರ್ವೆ ಎಷ್ಟು ವರ್ಷಕ್ಕೆ ಮುಗಿಯುತ್ತದೆ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ?

Sri A. G. RAMACHANDRA RAO.—It is not relevant to this issue. That is a different kind of survey.

Conversion of the New Type Middle Schools into Pukka Middle Schools.

Q.—92. Sri G. SIVAPPA (Holalkere).—

Will the Government be pleased to state:—

(*a*) the number of pukka middle schools and new type middle schools in the State;

(*b*) the number of new type middle schools granted in 1951-52;

(*c*) after what stage new type middle schools are converted into pukka middle schools;

(*d*) the usual qualifications of the Head Masters of new type middle schools;

(*e*) whether it is not the Head Master of the primary school that will usually work as the Head Master of the new type Middle school?

A.— Sri A. G. RAMACHANDRA RAO (Minister for Law and Education).—

(*a*) Pukka Middle Schools ... 728
New Type Middle Schools ... 647

(*b*) 54 (Fifty-four).

(*c*) When it is proved to the satisfaction of the Department that the New Type Middle Schools have worked satisfactorily with adequate strength in all the four Middle School Classes, the question of their gradual conversion into pukka Middle Schools will be considered as and when funds become available.

(*d*) M. S. or L. S. T. C. or U. S. T. C.

(*e*) Yes, more often.

ಶ್ರೀ ಜಿ. ಶಿವಪ್ಪನವರು.—ಎಲ್. ಟಿ. ಎಂ. ಸ್ಕೂಲ್‌ನಲ್ಲಿ ಇಂಗ್ಲೀಷ್ ಉಪಾಧ್ಯಾಯರು ಎಷ್ಟು ಜನ ಇದ್ದಾರೆ ಎಂಬುದನ್ನು ಹೇಳುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅಂಕಿ ಅಂಶ ಬಂದಿಲ್ಲ.

ಶ್ರೀ ಜಿ. ಶಿವಪ್ಪನವರು.—ಇಂಗ್ಲೀಷ್ ಉಪಾಧ್ಯಾಯರ ಅರ್ಹತೆ ಏನು?

ಶ್ರೀ ಎ. ಜಿ. ರಾಮಚಂದ್ರರಾಯರು.—ಉತ್ತರದಲ್ಲಿ ಕೊಟ್ಟಿದೆ.

ಶ್ರೀ ಜಿ. ಶಿವಪ್ಪನವರು.—ಅದು ಹೆಡ್ಮಾಸ್ಟರವರಿಗೆ ಇರಬೇಕಾದ ಅರ್ಹತೆಗಳು. ಇಂಗ್ಲಿಷ್ ಉಪಾಧ್ಯಾಯರಿಗೆ ಇರಬೇಕಾದ ಅರ್ಹತೆಗಳೇನು ಎಂಬುದು ನನ್ನ ಪ್ರಶ್ನೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಅದು ವ್ಯತ್ಯಾನವಾಗುತ್ತದೆ.

ಶ್ರೀ ಜಿ. ಶಿವಪ್ಪನವರು.—ಎಸ್. ಎಸ್. ಎಲ್. ಸಿ. ಪಾಸ್ ಮಾಡಿರುವವರು ಉಪಾಧ್ಯಾಯರಾಗಿರುವುದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಎಲ್.ಟಿ.ಎಂ. ಸ್ಕೂಲ್‌ನಲ್ಲಿ ಎಸ್.ಎಸ್.ಎಲ್.ಸಿ. ಕೋರ್ಸ್ ಆಗಿರುವವರೂ ಇರುತ್ತಾರೆ.

ಶ್ರೀ ಜಿ. ಶಿವಪ್ಪನವರು.—ಆ ರೀತಿ ಎಸ್. ಎಸ್. ಎಲ್.ಸಿ. ಕೋರ್ಸ್ ಆಗಿದ್ದು ಲೋಯರ್ ಸೆಕೆಂಡರಿ ಪಾಸ್ ಮಾಡಿರುವವರನ್ನು ಹೆಡ್ಮಾಸ್ಟರಾಗಿ ಸೆಲೆಕ್ಟ್ ಮಾಡಿರುವುದು ಗೊತ್ತೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಎರಡು ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಇವರನ್ನು ನೇಮಕ ಮಾಡುವಾಗ length of service ಮತ್ತು ಖರ್ಚಿನ ಬಾಬತು ಇವೆರಡನ್ನೂ ಗಮನಿಸಿ ಕೆಲಸ ನಡೆಯುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಜಿ. ಶಿವಪ್ಪನವರು.—ಎಲ್. ಟಿ. ಎಂ. ಸ್ಕೂರ್ ಕೊಡಬೇಕಾದರೆ ಡಿಸ್ಟ್ರಿಕ್ಟ್‌ವಾರು ಕೊಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಹೌದು.

ಶ್ರೀ ಜಿ. ಶಿವಪ್ಪನವರು.—ಸಾಮಾನ್ಯವಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ವಿದ್ಯಾವಂತರ ಶೇಕಡಾವಾರು ಸಂಖ್ಯೆ ಹೆಚ್ಚಾಗಿಲ್ಲ, ಅದ್ದರಿಂದ ಅಲ್ಲಿಗೆ ಹೆಚ್ಚು ಸ್ಕೂಲುಗಳನ್ನು ಕೊಡಬೇಕು ಎಂಬ ಅಂಶ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದು ಅಭಿಪ್ರಾಯದ ವಿಚಾರ.

ಶ್ರೀ ಜಿ. ಶಿವಪ್ಪನವರು.—ತಾವು ಹಿಂದೆ ಒಂದು ಸರ್ಕ್ಯುಲರ್ ಹೊರಡಿಸಿ ಸ್ಕೂಲು ಕಟ್ಟಿಡ ಕಟ್ಟಿಸಿಕೊಟ್ಟರೆ ಜಾಗ್ರತೆ ಸ್ಕೂಲು ಕೊಡುತ್ತೇವೆ ಎಂದು ಹೇಳಿದ್ದುದನ್ನು ಈಗ ಪಜಾ ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಪಜಾ ಮಾಡಿಲ್ಲ. ಅದು ಜಾರಿಗೆ ಕೊಡುವುದು ಕಷ್ಟವಾಗಿದೆ.

ಶ್ರೀ ಜಿ. ಶಿವಪ್ಪನವರು.—ಅನೇಕ ಕಡೆ ಕಟ್ಟಡ ಕಟ್ಟಿ ಸ್ಕೂಲು ಇಲ್ಲದೆ. ಹಾಗೆ ಇರುವುದರಿಂದ, ನ್ಯಾಷನಲ್ ಫಂಡ್ ದುರ್ವ್ಯಯವಾಗಿರುವುದು ಗೊತ್ತೆ?

ಶ್ರೀ ಎ. ಜಿ. ರಾಮಚಂದ್ರರಾಯರು.—ಆ ರೀತಿ ಒಂದು ದುಷ್ಪರಿಣಾಮ ಆಗಿರಬಹುದು.

ಶ್ರೀ ಟಿ. ಎಸ್ ಮೂಡಲಗಿರಿಗೌಡರು (ಕುಣಿಗಲು).—1951-52 ರಲ್ಲಿ ಮಂಜೂರು ಮಾಡಿದ ಎಲ್. ಟಿ. ಎಂ. ಮಿಡ್ಲ್‌ಸ್ಕೂಲುಗಳ ಪೈಕಿ ಗ್ರಾಮಾಂತರಗಳಲ್ಲಿರುವುದು ಎಷ್ಟು?

ಶ್ರೀ ಎ. ಜಿ. ರಾಮಚಂದ್ರರಾಯರು.—ನೋಟೀಸ್.